

# ಎಕ್ಸ್‌ರೇ ಮಾಡಿಸಿಕೊಂಡಿದ್ದೀರಾ..?

ನೀವು ಎಂದಾದರೂ ಎಕ್ಸ್‌ರೇ ಮಾಡಿಸಿಕೊಂಡಿದ್ದೀರಾ..? ಎಕ್ಸ್‌ರೇ ಎಂಬುದು ವಿಜ್ಞಾನದ ಅದ್ಭುತ ಕೊಡುಗೆ. ರಾಂಟಜೆನ್ ಎಂಬ ವಿಜ್ಞಾನಿ ಎಕ್ಸ್‌ರೇಯನ್ನು ಕಂಡುಹಿಡಿದ ಮೇಲೆ ವೈದ್ಯಕೀಯ ವಿಜ್ಞಾನದಲ್ಲಿ ದೊಡ್ಡ ಕ್ರಾಂತಿಯೇ ಸಂಭವಿಸಿತು. ಇದರಿಂದ ಶರೀರದ ಒಳಭಾಗದ ರೋಗಗಳನ್ನು ಪತ್ತೆ ಮಾಡಲು ವೈದ್ಯರಿಗೆ ತುಂಬ ಅನುಕೂಲವಾಯಿತು. ಈಗ ಬಣ್ಣದ ಹಾಗೂ ಡಿಜಿಟಲ್ ಎಕ್ಸ್‌ರೇಯ ಸೌಲಭ್ಯ ಲಭ್ಯ ಇರುವುದರಿಂದ ಶರೀರದ ಒಳಭಾಗದ ಅಂಗಗಳ ಹೆಚ್ಚು ಸ್ಪಷ್ಟ ಚಿತ್ರಗಳನ್ನು ಪಡೆಯಲು ಸಾಧ್ಯವಾಗಿದೆ. ಜೀರ್ಣಾಂಗಗಳು, ಕಿಡ್ನಿ, ಮೆದುಳು, ಬೆನ್ನು ಮೂಳೆ ಮುಂತಾದವುಗಳಿಗೆ ಸಂಭವಿಸಿದ ಹಾನಿ, ಮೂಳೆ ಮುರಿತ ಮುಂತಾದವುಗಳನ್ನು ಎಕ್ಸ್‌ರೇಯಿಂದ ಪತ್ತೆ ಮಾಡಲು ಸುಲಭವಾಗಿರುವುದರಿಂದ ರೋಗಕ್ಕೆ ತಕ್ಕ ಚಿಕಿತ್ಸೆ ನೀಡಲು ವೈದ್ಯರಿಗೆ ಅನುಕೂಲವಾಗಿದೆ.

ಆದರೆ ಎಲ್ಲಿ ಅನುಕೂಲತೆಗಳು ಇರುತ್ತವೆಯೋ ಅಲ್ಲಿ ಅನಾನುಕೂಲತೆಗಳು ಇರುತ್ತವೆ. ಪದೇ ಪದೇ ಎಕ್ಸ್‌ರೇಗೆ ಮೈಯೊಡ್ಡುವುದರಿಂದ ಹೆಚ್ಚಿನ ರೇಡಿಯೇಷನ್ ದಿಂದಾಗಿ ನಾನಾ ಬಗೆಯ ಕ್ಯಾನ್ಸರ್‌ಗಳು ವಿಶೇಷವಾಗಿ ಚರ್ಮದ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಎಕ್ಸ್‌ರೇ ಮಾಡಿಸಿಕೊಳ್ಳುವವರು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕಾದುದು ಅವಶ್ಯಕ.

## ಮುನ್ನೆಚ್ಚರಿಕೆ ಕ್ರಮಗಳು

* ವೈದ್ಯರ ಸಲಹೆಯಿಲ್ಲದೆ ಎಂದೂ ಎಕ್ಸ್‌ರೇಗೆ ಒಳಗಾಗಬೇಡಿ. ವೈದ್ಯರು ಕೂಡ ತೀರ ಅವಶ್ಯಕವಾಗಿದ್ದಾಗ ಮಾತ್ರ ಎಕ್ಸ್‌ರೇಗೆ ಒಳಗಾಗುವಂತೆ ರೋಗಿಗೆ ಸಲಹೆ ನೀಡಬೇಕು.
* ಎಕ್ಸ್‌ರೇ ರೂಂನಲ್ಲಿ ಎಕ್ಸ್‌ರೇ ತೆಗೆಯಲು ಸಂಪೂರ್ಣ ಸಿದ್ಧತೆಗಳಾಗುವವರೆಗೆ ರೋಗಿಯನ್ನು ಎಕ್ಸ್‌ರೇ ರೂಮಿಗೆ ಕಳುಹಿಸಬಾರದು.
* ರೋಗಿ ಸ್ತ್ರೀ, ಮಗು ಅಥವಾ ವೃದ್ಧರಾಗಿದ್ದರೆ ಅವರೊಂದಿಗೆ ಒಬ್ಬ ಸಹಾಯಕರು ಎಕ್ಸ್‌ರೇ ಕೋಣೆಗೆ ಹೋಗಬೇಕಾಗುತ್ತದೆ. ಅಂತಹ ಅನಿವಾರ್ಯತೆಯ ಸಮಯದಲ್ಲಿ ಅವರು ಹೆಚ್ಚು ಹೊತ್ತು ಎಕ್ಸ್‌ರೇ ಕೋಣೆಯಲ್ಲಿ ಕಳೆಯಬಾರದು, ಎಕ್ಸ್‌ರೇ ಮುಗಿದೊಡನೆ ತ್ವರಿತವಾಗಿ ಕೋಣೆಯಿಂದ ಹೊರಗೆ ಬಂದು ಬಿಡಬೇಕು.
* ರೋಗಿಯ ಸಹಾಯಕರು ರೋಗಿಯೊಡನೆ ಸ್ವಲ್ಪ ಸಮಯ ಎಕ್ಸ್‌ರೇ ರೂಮಿನಲ್ಲಿ ಕಳೆಯಬೇಕಾಗುವುದರಿಂದ ಅವರು ಎಕ್ಸ್‌ರೇ ಟೆಕ್ನಿಷಿಯನ್ನಿನಿಂದ ಏಪ್ರಾನ್ ಪಡೆದುಕೊಂಡು ಅದನ್ನು ಧರಿಸಬೇಕು.
* ಎಕ್ಸ್‌ರೇ ಮಾಡಿಸಿಕೊಳ್ಳುವವರು ಎಕ್ಸ್‌ರೇ ಕೋಣೆಯಲ್ಲಿ ಲಭ್ಯವಿರುವ ಬಟ್ಟೆಗಳನ್ನೇ ಧರಿಸಿಕೊಳ್ಳಬೆಕು. ಸಿಂಥೆಟಿಕ್ ಬಟ್ಟೆಗಳನ್ನು ಧರಿಸಿ ಎಕ್ಸ್‌ರೇ ಮಾಡಿಸಿಕೊಳ್ಳಬಾರದು.
* ಎಕ್ಸ್‌ರೇ ತೆಗೆಸಿಕೊಳ್ಳುವ ಮೊದಲು ಶರೀರದ ಮೇಲೆ ಧರಿಸಿರುವ ಎಲ್ಲ ಆಭರಣಗಳನ್ನು ಕಳಚಿ ಬಿಡಬೇಕು. ಏಕೆಂದರೆ ಆಭರಣಗಳು, ಬಟನ್‌ಗಳು ಮತ್ತು ಹುಕ್ಕುಗಳು ಎಕ್ಸ್‌ರೇ ಕಾರ್ಯದಲ್ಲಿ ಅಡಚಣೆಯನ್ನುಂಟು ಮಾಡುತ್ತವೆ. ಎದೆ, ಬೆನ್ನು, ಬೆನ್ನು ಮೂಳೆ ಇವುಗಳ ಎಕ್ಸ್‌ರೇ ಮಾಡಿಸುವಾಗ ಈ ಮುನ್ನೆಚ್ಚರಿಕೆ ಕ್ರಮ ಅಗತ್ಯ.
* ಎಕ್ಸ್‌ರೇ ತೆಗೆಸಿಕೊಳ್ಳುವಾಗ ಎಕ್ಸ್‌ರೇ ಟೆಕ್ನಿಷಿಯನ್ ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಉಸಿರಾಟವನ್ನು ನಿಯಂತ್ರಿಸಲು ಹೇಳಿದರೆ ಉಸಿರಾಟವನ್ನು ನಿಯಂತ್ರಿಸಬೇಕು. ಶರೀರವನ್ನು ಅಲುಗಾಡಿಸಬಾರದೆಂದು ಹೇಳಿದರೆ ಹಾಗೆಯೇ ಮಾಡಬೇಕು. ಎಕ್ಸರೇ ಟೆಕ್ನಿಷಿಯನ್ ಹೇಳುವುದನ್ನು ಗಮನವಿಟ್ಟು ಕೇಳಿ ಆತನಿಗೆ ಸಂಪೂರ್ಣ ಸಹಯೋಗ ನೀಡಬೇಕು.
* ಗರ್ಭಿಣಿ ಸ್ತ್ರೀಯರು ಬೇರೆ ರೋಗಿಯೊಂದಿಗೆ ಎಂದೂ ಎಕ್ಸ್‌ರೇ ಕೋಣೆಯೊಳಗೆ ಹೋಗಬಾರದು. ಅಲ್ಲಿನ ವಿಕಿರಣ ಗರ್ಭಸ್ಥ ಶಿಸುವಿನ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡಬಲ್ಲದು.
* ಒಂದು ವೇಳೆ ಸ್ವತಃ ಗರ್ಭಿಣಿ ಸ್ತ್ರೀಯೇ ಎಕ್ಸ್‌ರೇಗೆ ಒಳಗಾಗಬೇಕಾಗಿ ಬಂದರೆ ಹೊಟ್ಟೆಯ ಮೇಲೆ ಲೆಡ್ ಎಪ್ರಾನ್ ಹಾಕುವಂತೆ ಎಕ್ಸ್‌ರೇ ಟೆಕ್ನಿಷಿಯನ್ನನಿಗೆ ತಿಳಿಸಬೆಕು.
* ಕೆಲವೊಮ್ಮೆ ಎಕ್ಸ್‌ರೇಯನ್ನು ಖಾಲಿ ಹೊಟ್ಟೆಯಲ್ಲಿ ಮಾಡಿಕೊಳ್ಳಬೇಕಾಗಿರುತ್ತದೆ ಆದ್ದರಿಂದ ವೈದ್ಯರಿಂದ ಈ ವಿಷಯವನ್ನು ಮೊದಲೇ ತಿಳಿದುಕೊಳ್ಳಬೇಕಾದುದು ಉಚಿತ.
* ಎಲ್ಲ ಎಕ್ಸ್‌ರೇ ಫಿಲ್ಮ್‌ಗಳನ್ನು ಮತ್ತು ರಿಪೋರ್ಟ್‌ಗಳನ್ನು ಜೋಪಾನವಾಗಿ ಕಾಯ್ದಿಡಬೇಕು. ವೈದ್ಯರಿಗೆ ರೆಫರೆನ್ಸ್‌ಗಾಗಿ ಹಿಂದಿನ ಎಕ್ಸ್‌ರೇ ರಿಪೋರ್ಟ್‌ಗಳ ಅವಶ್ಯಕತೆ ಇರುತ್ತದೆ. ಕೊಲವೊಮ್ಮೆ ಹಿಂದಿನ ಮತ್ತು ಇಂದಿನ ಎಕ್ಸ್‌ರೇಗಳನ್ನು ತುಲನೆ ಮಾಡಿ ನೋಡಬೇಕಾಗುತ್ತದೆ. ನಾವು ವೈದ್ಯರನ್ನು ಬದಲಾಯಿಸಿದಾಗಲೂ ಸಹ ಹಿಂದಿನ ಎಕ್ಸ್‌ರೇ ರಿಪೋರ್ಟ್‌ಗಳ ಅವಶ್ಯಕತೆ ಉಂಟಾಗುತ್ತದೆ.
* ಎಕ್ಸ್‌ರೇ ಶೀಟನ್ನು ಮಡಿಸಬಾರದು ಮತ್ತು ಅದರ ಮೇಲೆ ಯಾವುದೇ ಭಾರವಾದ ವಸ್ತುವನ್ನು ಇಡಬಾರದು. ಅದರ ಮೇಲೆ ಕಲೆಗಳು ಬೀಳದಂತೆ ಎಚ್ಚರ ವಹಿಸಬೇಕು. ಇವು ತುಂಬ ಚಿಕ್ಕದಾದ ವಿಷಯಗಳೆನಿಸಿದರೂ ರೋಗ ಪತ್ತೆ ಕಾರ್ಯಕ್ಕೆ ಮತ್ತು ವಿಕಿರಣದಿಂದ ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಮೇಲೆ ಹೇಳಿದ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕಾದುದು ತುಂಬ ಅವಶ್ಯಕ.

**■ ಮುರಲೀಧರ್ ಕುಲಕರ್ಣಿ, ಬೀದರ್**



